ಕರ್ನಾಟಕ ಸರ್ಕಾರ
# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

ಅನುಬಂಧ-9

112

ಕರಾಉಶಿಪ/51/22ನೇ ಕಾ.ನಿ. ಸಮಿತಿ/2020-21/214 ದಿನಾಂಕ: 09.04.2021

ಗೆ,
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ
ಕಾರ್ಯನಿರ್ವಾಹಕ ಸಮಿತಿಯ ಎಲ್ಲಾ ಸದಸ್ಯರುಗಳಿಗೆ

ಮಾನ್ಯರೇ,

ವಿಷಯ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 22ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳು

ದಿನಾಂಕ:26.03.2021 (ಶುಕ್ರವಾರ) ರಂದು ಬೆಳಗ್ಗೆ 10:00 ಗಂಟೆಗೆ ಪ್ರೊ.ಬಿ.ತಿಮ್ಮೇಗೌಡ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 22ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳನ್ನು ಅವಗಾಹನೆಗಾಗಿ ಕಳುಹಿಸಲಾಗಿದೆ.

ವಂದನೆಗಳೊಂದಿಗೆ,

(ಪ್ರೊ. ಗೋಪಾಲಕೃಷ್ಣ ಜೋಷಿ)
ಕಾರ್ಯನಿರ್ವಾಹಕ ನಿರ್ದೇಶಕರು

ಅಡಕ: ಮೇಲಿನಂತೆ

ಪ್ರತಿ ಮಾಹಿತಿಗಾಗಿ:

1. ಉಪಾಧ್ಯಕ್ಷರ ಆಪ್ತಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್
2. ಕಛೇರಿ ಪ್ರತಿ.

ನಂ. 30, ಪ್ರಸನ್ನಕುಮಾರ ಬ್ಲಾಕ್, ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾಲಯ ಆವರಣ, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು - 09
ದೂ : 080 2234 1391 ಫ್ಯಾಕ್ಸ್ : 080 2234 1393, ವೆಬ್ : kshec.ac.in ಇಮೇಲ್ : ksche.bangalore@gmail.com, edkshec@yahoo.com

# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು

## ದಿನಾಂಕ:26.03.2021 ರಂದು ಬೆಳಿಗ್ಗೆ 10.00 ಗಂಟೆಗೆ ಜರುಗಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 22ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳು.

ಉಪಸ್ಥಿತರು:

| ಕ್ರ.ಸಂ | ಹೆಸರು ಮತ್ತು ಹುದ್ದೆ | ಸದಸ್ಯರು |
|---|---|---|
| 1 | ಪ್ರೊ. ಬಿ. ತಿಮ್ಮೇಗೌಡ<br>ಉಪಾಧ್ಯಕ್ಷರು<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ | ಅಧ್ಯಕ್ಷರು |
| 2 | ಶ್ರೀ ಕುಮಾರ್ ನಾಯಕ್ ಜಿ. (ಭಾ.ಆ ಸೇ)<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು<br>ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಪದ ನಿಮಿತ್ತ ಸದಸ್ಯರು |
| 3 | ಪ್ರೊ. ಗೋಪಾಲಕೃಷ್ಣ ಜೋಷಿ<br>ಕಾರ್ಯನಿರ್ವಾಹಕ ನಿರ್ದೇಶಕರು<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ | ಸದಸ್ಯ ಕಾರ್ಯದರ್ಶಿಗಳು |
| 4 | ಪ್ರೊ. ಗೋಪಾಲ್ ನಾಯಕ್, (ಆನ್–ಲೈನ್ ಮೂಲಕ)<br>ಐ.ಐ.ಎಂ.ಬಿ, ಬೆಂಗಳೂರು | ಸದಸ್ಯರು |
| 5 | ಡಾ॥ ಕರಿಸಿದ್ದಪ್ಪ (ಆನ್–ಲೈನ್ ಮೂಲಕ)<br>ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ<br>ಬೆಳಗಾವಿ | ಸದಸ್ಯರು |
| 6 | ಡಾ॥ ಹೆಚ್.ಎ ರಂಗನಾಥ್<br>ವಿಶ್ರಾಂತ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ<br>ಮತ್ತು ಮಾಜಿ ನಿರ್ದೇಶಕರು, NAAC | ಸದಸ್ಯರು |
| 7 | ಡಾ॥ ಟಿ.ಎನ್ ತಾಂಡವಗೌಡ<br>ಆಡಳಿತಾಧಿಕಾರಿಗಳು<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ | ಆಹ್ವಾನಿತರು |
| 8 | ಶ್ರೀ.ಹೆಚ್.ಸಿ. ಜಯಪ್ರಕಾಶ್<br>ಲೆಕ್ಕಾಧಿಕಾರಿಗಳು<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ | ಆಹ್ವಾನಿತರು |

ಪ್ರಾರಂಭದಲ್ಲಿ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕರು ಸಭೆಯಲ್ಲಿ ಹಾಜರಿದ್ದ ಮತ್ತು ಆನ್–ಲೈನ್ ಹಾಜರಾದ ಎಲ್ಲಾ ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿ, ಮಾನ್ಯ ಸಭಾಧ್ಯಕ್ಷರನ್ನು ಸಭೆ ನಡೆಸಿಕೊಡಲು ಕೋರಿದರು.

ಕಾರ್ಯಸೂಚಿಯನ್ನು ಪರಿಗಣನೆಗೆ ತೆಗೆದುಕೊಳ್ಳುವ ಮುನ್ನ, ಇತ್ತೀಚೆಗೆ ನಿಧನರಾದ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿದ್ದ ಪ್ರೊ. ಎಂ. ಮಹದೇವಪ್ಪ ರವರಿಗೆ ಸಭೆ ಶ್ರದ್ಧಾಂಜಲಿ ಸಲ್ಲಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಿತು. ಶ್ರೀಯುತರು ಸಮಿತಿಯ ಸದಸ್ಯರಾಗಿದ್ದು, ಪರಿಷತ್ತಿನ ವಿವಿಧ ಉಪಸಮಿತಿಗಳಲ್ಲಿ ಭಾಗವಹಿಸಿ ಸಲಹೆಗಳನ್ನು ನೀಡುವುದರ ಮೂಲಕ ಸಲ್ಲಿಸಿದ ಸೇವೆಯನ್ನು ಸಭೆ ಶ್ಲಾಘಿಸಿ ದಾಖಲು ಮಾಡಲಾಯಿತು. ನಂತರ ಕಾರ್ಯಸೂಚಿಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯಗಳು |
|---|---|
| 1 | **ವಿಷಯ 21ನೇ ಕಾರ್ಯನಿರ್ವಾಹಕ ಸಮಿತಿಯ ನಡವಳಿಗಳನ್ನು ದೃಢೀಕರಿಸುವ ಕುರಿತು.**<br><br>ದಿನಾಂಕ:22.01.2021 ರಂದು ನಡೆದ 20ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳನ್ನು ದೃಢೀಕರಿಸಲು ಕಾರ್ಯನಿರ್ವಾಹಕ ಸಮಿತಿ ಸಭೆಗೆ ಸಲ್ಲಿಸಿದೆ.<br>(21ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳನ್ನು ಲಗತ್ತಿಸಿದೆ)<br><br>ನಿರ್ಣಯ: ದಿನಾಂಕ:22.01.2021 ರಂದು ಜರುಗಿದ ಕಾರ್ಯನಿರ್ವಾಹಕ ಸಮಿತಿಯ 21ನೇ ಸಭೆಯ ನಡವಳಿಗಳಿಗೆ ಯಾವುದೇ ಆಕ್ಷೇಪಣೆಗಳು ಬಾರದೇ ಇರುವ ಕಾರಣ ನಡವಳಿಗಳನ್ನು ದೃಢೀಕರಿಸಲಾಯಿತು. |
| 2 | **ವಿಷಯ : ವಿಷಯ ಸಂಖ್ಯೆ 02: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 21ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳು.**<br><br>ದಿನಾಂಕ: 22.01.2021 ರಂದು ನಡೆದ 21ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳು ಮತ್ತು ತೆಗೆದುಕೊಂಡ ಕ್ರಮಗಳನ್ನು ಕಾರ್ಯನಿರ್ವಾಹಕ ಸಮಿತಿ ಸಭೆಯ ಮುಂದೆ ಮಂಡಿಸಿದೆ.<br><br>ನಿರ್ಣಯ: **ಸಮಿತಿಯು 21ನೇ ಸಭೆಯ ನಡವಳಿಗಳ/ನಿರ್ಣಯಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳನ್ನು ಅವಲೋಕಿಸಿ, ಅನುಮೋದಿಸಿತು** |
| 3 | **ವಿಷಯ: 2021-22ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರ ಒದಗಿಸಲಾದ ಅನುದಾನಕ್ಕೆ ಕ್ರಿಯಾ ಯೋಜನೆ ಸಿದ್ಧಪಡಿಸಿ ಅನುಮೋದನೆ ಪಡೆಯುವ ಬಗ್ಗೆ**<br><br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ 2021-22ನೇ ಸಾಲಿನ ಆಯವ್ಯಯದಲ್ಲಿ ರೂ.2.00 ಕೋಟಿಗಳ ಅನುದಾನ ನೀಡಿದ್ದು, ಈ ಅನುದಾನಕ್ಕೆ ತಕ್ಕಂತೆ ಕ್ರಿಯಾ ಯೋಜನೆ ಸಿದ್ಧಪಡಿಸಿ ಕಾರ್ಯನಿರ್ವಾಹಕ ಸಮಿತಿಯ ಅನುಮೋದನೆಗೆ ಮಂಡಿಸಿದೆ.<br><br>ನಿರ್ಣಯ: **ಪರಿಷತ್ತಿಗೆ 2021-22ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರ ಒದಗಿಸಿರುವ ರೂ.2.00 ಕೋಟಿಗಳ ಅನುದಾನಕ್ಕೆ ಸಿದ್ಧಪಡಿಸಿರುವ ಕ್ರಿಯಾ ಯೋಜನೆಯನ್ನು ಸಭೆ ಅವಲೋಕಿಸಿತು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಮಾತನಾಡಿ ಆರ್ಥಿಯ ಇಲಾಖೆಯೊಡನೆ ಸಮಾಲೋಚಿಸಿ, ಪರಿಷತ್ತಿಗೆ ಇನ್ನೂ ಹೆಚ್ಚಿನ ಅನುದಾನವನ್ನು ಒದಗಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.**<br><br>**ಕಾರ್ಯನಿರ್ವಾಹಕ ನಿರ್ದೇಶಕರು ಮಾತನಾಡಿ ಪರಿಷತ್ತಿನ ಕಾರ್ಯಚಟುವಟಿಕೆಗಳಿಗೆ ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು ಮತ್ತು ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರು ಹೆಚ್ಚಿನ ಅನುದಾನ ಒದಗಿಸಲು ತೋರಿಸುತ್ತಿರುವ ಆಸಕ್ತಿಗೆ ಧನ್ಯವಾದಗಳನ್ನು ತಿಳಿಸಿದರು.**<br><br>**ಸಭಾಧ್ಯಕ್ಷರು ಮಾತನಾಡಿ ಮುಂದಿನ ದಿನಗಳಲ್ಲಿ ಸರ್ಕಾರದದಿಂದ ಹೆಚ್ಚುವರಿ ಅನುದಾನ ಲಭಿಸಿದರೆ ಪರಿಷತ್ತಿನಲ್ಲಿ ಇನ್ನೂ ಹೆಚ್ಚಿನ ಚಟುವಟಿಕೆಗಳನ್ನು ಆಯೋಜಿಸಬಹುದು ಎಂದರು.** |

| | |
|---|---|
| 4 | ವಿಷಯ: ಪರಿಷತ್ತಿನ 2018–19 ಮತ್ತು 2019–20ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸುವ ಕುರಿತು (ವರದಿ ಲಗತ್ತಿಸಿದೆ)<br><br>ನಿರ್ಣಯ: 2018–19 ಮತ್ತು 2019–20 ನೇ ಸಾಲಿನ ಕರಡು ವಾರ್ಷಿಕ ವರದಿಗಳನ್ನು ಕಾರ್ಯನಿರ್ವಾಹಕ ಸಮಿತಿ ಅವಲೋಕಿಸಿ ಅನುಮೋದಿಸಿತು ಹಾಗೂ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿತು. |
| 5 | ವಿಷಯ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಳಿತಾಯ ಖಾತೆಯಲ್ಲಿರುವ ಹಣದ ವಿವರಗಳು (28.02.2021 ರ ಅಂತ್ಯಕ್ಕೆ) |

| | ಕೋಟಿಗಳಲ್ಲಿ | ಅನುದಾನದ ಮೇಲೆ ಗಳಿಸಿದ ಬಡ್ಡಿ (ಲಕ್ಷಗಳಲ್ಲಿ) |
|---|---|---|
| ಕಾಲೇಜು ಶಿಕ್ಷಣ ಇಲಾಖೆ | 3.39 | 10.87 |
| ತಾಂತ್ರಿಕ ಶಿಕ್ಷಣ ಇಲಾಖೆ | 2.02 | 6.45 |
| ಏಕ್ ಭಾರತ್ ಶ್ರೇಷ್ಠ ಭಾರತ್ | 4.00 | 9.32 |
| ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು | 3.49 | |

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು

28.02.2021 ಕ್ಕೆ ಬ್ಯಾಂಕಿನಲ್ಲಿರುವ ಮೊತ್ತ : ರೂ. 3.49 ಕೋಟಿ
ಖಜಾನೆಗೆ ಸಲ್ಲಿಸಿರುವ 3 ಮತ್ತು 4ನೇ ಕಂತಿನ ಅನುದಾನ : ರೂ. 1.00 ಕೋಟಿ
2021–22ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನ: ರೂ. 2.00 ಕೋಟಿ

ಒಟ್ಟು : ರೂ. 6.49 ಕೋಟಿ

ಈ ಮೇಲ್ಕಂಡ ವಿಷಯವನ್ನು ಕಾರ್ಯನಿರ್ವಾಹಕ ಸಮಿತಿ ಸಭೆಯ ಅವಗಾಹನೆಗಾಗಿ ಮಂಡಿಸಿದೆ

ನಿರ್ಣಯ: ಫೆಬ್ರವರಿ–2021ರ ಅಂತ್ಯಕ್ಕೆ ಉನ್ನತ ಶಿಕ್ಷಣ ಪರಿಷತ್ತಿನ ಉಳಿತಾಯ ಖಾತೆಯಲ್ಲಿರುವ ಒಟ್ಟು ರೂ.6.49 ಕೋಟಿಗಳು (2020–21ನೇ ಸಾಲಿನ ಅನುದಾನ ರೂ.2.00 ಕೋಟಿಯನ್ನು ಒಳಗೊಂಡು) ಇರುವುದನ್ನು ಪರಿಷತ್ತು ಗಮನಿಸಿತು. ಡಾ॥ ಕರಿಸಿದ್ದಪ್ಪನವರು ಮಾತನಾಡಿ ಉಳಿತಾಯ ಖಾತೆಯಲ್ಲಿರುವ ಅನುದಾನವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಸೂಚಿಸಿದರು.

ಅಪರ ಮುಖ್ಯ ಕಾರ್ಯದರ್ಶಿಯವರು ಮಾತನಾಡಿ "ಏಕ್ ಭಾರತ್ ಶ್ರೇಷ್ಠ ಭಾರತ್" ಯೋಜನೆಗೆ ಸಂಬಂಧಿಸಿದ ರೂ.4.00 ಕೋಟಿಗಳನ್ನು ಆ ಉದ್ದೇಶಕ್ಕೆ ಖರ್ಚು ಮಾಡದಿರುವುದರಿಂದ ಬೇರೆ ಉದ್ದೇಶಕ್ಕೆ ಖರ್ಚು ಮಾಡಬಹುದೇ ಎಂದು ಕೇಳಿದರು. ಕಳೆದ ವರ್ಷ ಕೋವಿಡ್–19 ರ ಕಾರಣಗಳಿಂದಾಗಿ ಸದರಿ ಯೋಜನೆಗೆ ಚಾಲನೆ ಕೊಡಲಾಗಲಿಲ್ಲ ಎಂದು ತಿಳಿಸಲಾಯಿತು. ಪ್ರಸ್ತುತ ವರ್ಷದಲ್ಲಿ ಈ ಯೋಜನೆಯನ್ನು ಜಾರಿಗೊಳಿಸಬಹುದೇ ಎಂಬ ಬಗ್ಗೆ ಪರಿಶೀಲಿಸಿ, ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ಕ್ರಮವಹಿಸಲು ನಿರ್ಧರಿಸಲಾಯಿತು.

6 ವಿಷಯ: ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಇರಬೇಕಾದ ಪೀಠಗಳ ಸಂಖ್ಯೆಯನ್ನು ನಿರ್ಧರಿಸುವ ಸಂಬಂಧ ಕಾರ್ಯಸೂಚಿಯನ್ನು ರೂಪಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ: ಇಡಿ 25 ಯುಟಿಟಿ 2019 ದಿನಾಂಕ:11-12-2019 ಮತ್ತು ದಿನಾಂಕ: 02-03-2021

2) ಪರಿಷತ್ತಿನ ಅಧಿಸೂಚನೆ ಸಂ.ಕರಾಉಶಿಪ/ಪೀಠಗಳ ಸ್ಥಾಪನೆ/2019-20/14 ದಿನಾಂಕ:10-01-2020 ಮತ್ತು 24-11-2020

3) ಸಮಿತಿಯ ಅಧ್ಯಕ್ಷರು ಪರಿಷತ್ತಿಗೆ ಸಲ್ಲಿಸಿದ ವರದಿಯ ದಿನಾಂಕ:30-11-2020

ಟಿಪ್ಪಣಿ :

ಸರ್ಕಾರದ ಪತ್ರ ದಿನಾಂಕ: 11-12-2019 ರ ಪತ್ರದಲ್ಲಿ, ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಪೀಠಗಳನ್ನು ಸ್ಥಾಪಿಸಲು ಯಾವುದೇ ಪೂರ್ವ ಸಿದ್ಧತೆ, ಕ್ರಿಯಾಯೋಜನೆ ಹಾಗೂ ದೂರದೃಷ್ಟಿ ಇಲ್ಲದೆ ಹಾಗೂ ಪೀಠಗಳ ಕಾರ್ಯಸೂಚಿ, ಕಾರ್ಯಯೋಜನೆ, ಪ್ರಕಾರ್ಯಗಳು, ಸಂಶೋಧನಾ ಮಾರ್ಗಸೂಚಿಗಳು ಇತರೆ ಅಗತ್ಯತೆಗಳನ್ನು ಗೊತ್ತುಪಡಿಸದೇ ಯಾಂತ್ರಿಕವಾಗಿ ಹಾಗೂ ಮನಸ್ವೇಚ್ಛೆಯಿಂದ ಉನ್ನತ ಶಿಕ್ಷಣ ಇಲಾಖೆಯಡಿಯ ವಿಶ್ವವಿದ್ಯಾಲಯಗಳಿಂದ ಪ್ರಸ್ತಾವನೆಗಳನ್ನು ಸಲ್ಲಿಸಲಾಗುತ್ತಿದೆ. ಸರ್ಕಾರದಿಂದ ಗಣನೀಯ ಪ್ರಮಾಣದ ಮೂಲಧನವನ್ನು ಮಂಜೂರು ಮಾಡುವ ಧಾರುಣಸಾಧ್ಯತೆಯ ಹಾಗೂ ದೇಣಿಗೆಯಂತೆ ಇತರೆ ಪರ್ಯಾಯ ಮೂಲಗಳ ಮೂಲಕ ಅನುದಾನ ಕ್ರೋಡೀಕರಿಸುವ ಅವಕಾಶಗಳ ಬಗ್ಗೆ ಅವಲೋಕಿಸುವುದು ಅಜ್ಞಾಪಕವಾಗುತ್ತದೆ.

ನಿರ್ಣಾಯಕ ವಿಷಯಗಳ ಬಗ್ಗೆ ಆಳವಾದ ಪರ್ಯಾಯೋಚನೆ/ ಅಧ್ಯಯನ ನಡೆಸಲು ಅನುವಾಗುವಂತೆ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಸಂಪನ್ಮೂಲಗಳು ಹಾಗೂ ಪರಂಪರೆಯನ್ನು ಗಣವೃದ್ಧಿ ಹಾಗೂ ಉತ್ಕೃಷ್ಟಗೊಳಿಸುವ ಉದ್ದೇಶದಿಂದ ಭಾರತ ನಾಗರೀಕರಾಗಿರುವ ಅಥವಾ ಭಾರತೀಯ ಮೂಲದವರಾಗಿರುವ ನೋಬೆಲ್ ಪ್ರಶಸ್ತಿ ವಿಜೇತರು, ಶ್ರೇಷ್ಠ ಹಾಗೂ ಸುಪ್ರಸಿದ್ಧ ವ್ಯಕ್ತಿಗಳ ಹೆಸರಿನಲ್ಲಿ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಹಾಗೂ ಈ ಪೀಠಗಳಿಗೆ ಆರ್ಥಿಕಾನುದಾನ ಒದಗಿಸುವ ಯೋಜನೆಯನ್ನು ವಿಶ್ವವಿದ್ಯಾಲಯ ಧನಸಹಾಯ ಆಯೋಗದಿಂದ ಉಪಕ್ರಮಿಸಿ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿದೆ. ಯುಜಿಸಿ ಅನುದಾನಿತ ಅಧ್ಯಯನ ಪೀಠಗಳ ಸಂಖ್ಯೆಯನ್ನು ಸದರಿ ಸಂಸ್ಥೆಯಿಂದಲೇ ನಿರ್ಧರಿಸಲಾಗುತ್ತದೆ.

ಆದುದರಿಂದ, ಪೂರ್ವಪ್ರಸ್ತಾಪಿತ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಪ್ರಾದೇಶಿಕ ಅಧಿಕಾರ ವ್ಯಾಪ್ತಿ, ಆರ್ಥಿಕ ಸಾಮರ್ಥ್ಯ, ಸಂಶೋಧನಾ/ಮಾನವ ಸಂಪನ್ಮೂಲಗಳಂತಹ ಪ್ರಮಾಣಕಗಳ ಆಧಾರದ ಮೇಲೆ ಸಾಹಿತಿಗಳು, ಚಿಂತಕರುಗಳು, ಸಾಮಾಜಿಕ ಸುಧಾರಕರು, ಕ್ರಾಂತಿಕಾರರು, ಐತಿಹಾಸಿಕ ವ್ಯಕ್ತಿಗಳು, ಅನುಭಾವಿಗಳು, ಪ್ರಭಾವಿ ರಾಜಕಾರಣಿಗಳು ಮತ್ತು ಶರಣ/ಸಂತರ ಹೆಸರುಗಳಲ್ಲಿ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಇರಬೇಕಾದ ಪೀಠಗಳ ಸಂಖ್ಯೆಯನ್ನು ನಿರ್ಧರಿಸುವ ಸಂಬಂಧ ಸಂಬಂಧಪಟ್ಟ ವಿಶ್ವವಿದ್ಯಾಲಯಗಳೊಂದಿಗೆ ಸಮಾಲೋಚಿಸಿ ಸಮಗ್ರ ಪರಿಯೋಜನೆಯನ್ನು ರೂಪಿಸುವಂತೆ ಸರ್ಕಾರವು ಪರಿಷತ್ತಿಗೆ ಸೂಚಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಸದರಿ ವಿಷಯದ ಕುರಿತು ಪರಿಶೀಲಿಸಿ ವರದಿ ನೀಡಲು ಪರಿಷತ್ತು ಪ್ರೊ.ಓ.ಅನಂತರಾಮಯ್ಯ, ವಿಶ್ರಾಂತ ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:10-01-2020 ರಂದು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಈ ಬಗ್ಗೆ ವಿವರವಾಗಿ ಚರ್ಚಿಸಿ ದಿನಾಂಕ: 30-11-2020 ರಂದು ಪರಿಷತ್ತಿಗೆ ಈ ಕುರಿತು ವರದಿಯನ್ನು ಸಲ್ಲಿಸಲಾಗಿದೆ.

ತಜ್ಞರ ಸಮಿತಿಯು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 22ನೇ ಕಾರ್ಯನಿರ್ವಾಹಕ ಸಮಿತಿಯ ಸಭೆಯಲ್ಲಿ ಮಂಡಿಸಲಾಗಿದೆ.

| | |
|---|---|
| | ಚರ್ಚೆ: ಸಭಾಧ್ಯಕ್ಷರು ವಿಷಯದ ಹಿನ್ನಲೆಯನ್ನು ವಿವರಿಸಿದರು. ಪ್ರೊ. ಹೆಚ್.ಎ ರಂಗನಾಥ್ ರವರು ಮಾತನಾಡಿ ಅಧ್ಯಯನ ಪೀಠವನ್ನು ಸ್ಥಾಪಿಸುವುದಕ್ಕೆ ಕನಿಷ್ಟ ಮೊತ್ತವನ್ನು ನಿಗದಿಪಡಿಸಬೇಕಾದ ಅಗತ್ಯವಿದೆ, ಇದಕ್ಕಾಗಿ, ಪರಿಷತ್ತು ಮಾರ್ಗಸೂಚಿಗಳನ್ನು ರಚಿಸಬೇಕಾಗುತ್ತದೆ ಎಂದು ಅಭಿಪ್ರಾಯ ಪಟ್ಟರು.<br>ಪ್ರೊ. ಗೋಪಾಲ್ ನಾಯಕ್ ರವರು ಮಾತನಾಡಿ, ಅಧ್ಯಯನ ಪೀಠಗಳನ್ನು ಸ್ಥಾಪಿಸಲು ಪ್ರಾಯೋಜಕತ್ವ ಪಡೆಯಬಹುದು ಈ ಬಗ್ಗೆ ಭಾರತೀಯ ನಿರ್ವಹಣಾ ಸಂಸ್ಥೆ (Indian institute of Management) ಮಾರ್ಗಸೂಚಿಗಳನ್ನು ಪರಿಷ್ಕರಿಸಿದೆ. ಅದೇ ರೀತಿ ಮಾರ್ಗಸೂಚಿಗಳನ್ನು ತಯಾರಿಸಬೇಕಿದೆ ಎಂದು ತಿಳಿಸಿದರು.<br>ಪ್ರೊ. ಕರಿಸಿದ್ದಪ್ಪನವರು ಮಾತನಾಡಿ ಪರಿಷತ್ತಿನ ವತಿಯಿಂದ ಸೂಕ್ತ ಅಧ್ಯಯನ ಪೀಠಗಳ ಉದ್ದೇಶಗಳನ್ನು ಸ್ಪಷ್ಟೀಕರಿಸಿ, ಸಮಗ್ರ ಮಾರ್ಗಸೂಚಿಗಳನ್ನು ಮತ್ತು ಮಾದರಿ ಪರಿನಿಯಮಗಳನ್ನು ತಯಾರಿಸಿ, ಎಲ್ಲಾ ವಿಶ್ವವಿದ್ಯಾಲಯಗಳಿಗೆ ಕಳುಹಿಸಬಹುದು ಎಂದು ತಿಳಿಸಿದರು.<br>ಉಪಾಧ್ಯಕ್ಷರು ಮಾತನಾಡಿ ಹೆಚ್ಚಿನ ಸಂಖ್ಯೆಯ ಅಧ್ಯಯನ ಪೀಠಗಳು ಇರುವ ವಿಶ್ವವಿದ್ಯಾಲಯಗಳ ಕುಲಪತಿಗಳೊಂದಿಗೆ ಚರ್ಚಿಸಿ, ಮಾರ್ಗಸೂಚಿಗಳನ್ನು ಮತ್ತು ಮಾದರಿ ಪರಿನಿಯಮಗಳನ್ನು ತಯಾರಿಸಬಹುದು ಎಂದು ತಿಳಿಸಿದರು.<br>ನಿರ್ಣಯ: ಚರ್ಚೆಯ ನಂತರ ಈ ವಿಷಯವನ್ನು ಪರಿಷತ್ತಿನ ಮುಂದಿನ ಸಾಮಾನ್ಯ ಸಭೆಯಲ್ಲಿ ಮಂಡಿಸಲು ನಿರ್ಧರಿಸಲಾಯಿತು. ಏತನ್ಮಧ್ಯೆ –ಸದಸ್ಯರು ಮೇಲೆ ಸೂಚಿಸಿದ ಅಭಿಪ್ರಾಯಗಳಂತೆ ಕ್ರಮ ಜರುಗಿಸಲು ನಿರ್ಣಯಿಸಲಾಯಿತು.<br>ಕಾರ್ಯನಿರ್ವಾಹಕ ನಿರ್ದೇಶಕರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು. |

(ಪ್ರೊ. ಗೋಪಾಲಕೃಷ್ಣ ಜೋಷಿ)
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

(ಪ್ರೊ.ಬಿ. ತಿಮ್ಮೇಗೌಡ)
ಉಪಾಧ್ಯಕ್ಷರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್